**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.**

**ಸಿ.ಸಿ.ನಂ. 1181/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಗಂಗರಾಜು** | | |
| **ಗಂಡಃತಂದೆಃಹೆಸರು** | **ಲೇಟ್ ನರಸಿಂಹಪ್ಪ** | **ಪಿಡಬ್ಲ್ಯೂಃ** | **6** |
| **ವಯಸ್ಸುಃ** | **30 ವರ್ಷ** | **ಸಿಡಬ್ಲ್ಯೂಃ** | **13** |
| **ಉದ್ಯೋಗಃ** | **ಕೂಲಿ ಕೆಲಸ** | | |
| **ವಾಸ ಸ್ಥಳಃ** | **ಶಾಪೂರ ಗ್ರಾಮ** | | |

**ದಿನಾಂಕ 20-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ-**

ದಿಃ 11-05-2022 ರಂದು ಸಂಜೆ 7.00 ಗಂಟೆ ಸಮಯದಲ್ಲಿ ಚಿಂತಾಮಣಿಯಿಂದ ನನ್ನ ಭಾವ ಚಾಸಾ 2 ಮತ್ತು ಅವರ ಮಗಳು ವನಜ ಶಾಪೂರಿಗೆ ಬರುತ್ತಿದ್ದರು. ನನ್ನ ಭಾವ ಚಾಸಾ 2 ರವರು ನಾವು ಬರುತ್ತಿದ್ದೇವೆ ಎಂದು ಫೋನಿನ ಮೂಲಕ ನನಗೆ ತಿಳಿಸಿದರು ನಾನು ಪೆರುಮಾಚನಹಳ್ಳಿ ಗೇಟ್ ನ ಬಳಿ ಕಾಯುತ್ತಿದ್ದೆ. ನಂತರ ಕೆಂದನಹಳ್ಳಿ ಗೇಟ್ ನ ಬಳಿ ಅಪಘಾತ ಆದ ಶಬ್ಧ ಕೇಳಿಸಿತು. ಯಾರು ಎಂದು ನಾನು ನೋಡಲು ಕೆಂದನಹಳ್ಳಿ ಗೇಟ್ ನ ಬಳಿ ಹೋದಾಗ ನನ್ನ ಭಾವ ಚಾಸಾ 2 ರವರಿಗೆ ಅಪಘಾತ ಆಗಿತ್ತು. ನಾನು ಚಾಸಾ 1 ರವರಿಗೆ ಕರೆ ಮಾಡಿ ವಿಷಯ ತಿಳಿಸಿದೆ. ನಂತರ ಮಗು ವನಜಳನ್ನು ಆಗಲೆ ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ಯಾರೋ ಬಂದು ಸೇರಿಸಿದ್ದರು. ನಂತರ ನಾನು ಚಾಸಾ 2 ರವರನ್ನು ಆ್ಯಂಬುಲೆನ್ಸ್ ನಲ್ಲಿ ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆ. ನಂತರ ವೈದ್ಯರು ಇಲ್ಲಿ ಆಗಲ್ಲ ಎಂದರು, ಆದ್ದರಿಂದ ಚಾಸಾ 2 ಮತ್ತು

ವನಜಳನ್ನು ಕೋಲಾರ ಜಾಲಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ವನಜ ಆಸ್ಪತ್ರೆಯಲ್ಲಿ 9 ದಿನಗಳು ಐ ಸಿ ಯು ನಲ್ಲಿ ಇದ್ದಳು. ನಂತರ 20-05-2022 ರಂದು ಮೃತಪಟ್ಟಳು.

ನಂತರ ವಿಚಾರಿಸಲಾಗಿ ಅಪಘಾತದ ಸಮಯದಲ್ಲಿ ಆಟೋ ಚಿಂತಾಮಣಿಯಿಂದ ಪೆರುಮಾಚನಹಳ್ಳಿ ಕಡೆ ಬರುತ್ತಿತ್ತು. ಬೆಂಗಳೂರು ರಸ್ತೆ ಕಡೆಯಿಂದ ಒಂದು ಮಿನಿ ಬಸ್ಸು ಮದುವೆ ಬಾಡಿಗೆಯನ್ನು ಮಾಡಿಕೊಂಡು ಬರುತ್ತಿತ್ತು.ಆ ಬಸ್ ನ ನಂಬರ್ ಕೆಎ03-ಎ-5623 ಆಗಿತ್ತು. ಸುಮಾರು ಸಂಜೆ 7.00 ಗಂಟೆ ಸಮಯದಲ್ಲಿ ಅಟೋ ಸರಿಯಾದ ರೂಟಿನಲ್ಲಿ ಹೋಗುತ್ತಿದ್ದು, ಮಿನಿ ಬಸ್ಸು ಅತಿವೇಗವಾಗ ಮತ್ತು ಅಜಾಗರೂಕತೆಯಿಂದ ಬಂದು ಒವರ್ ಟೇಕ್ ಮಾಡಲು ಬಂದು ಆಟೋಗೆ ಡಿಕ್ಕಿ ಹೊಡೆಯಿತು. ಆಗ ವನಜಗೆ ತಲೆಗೆ ಪೆಟ್ಟು ಆಗಿತ್ತು ಮತ್ತು ನನ್ನ ಭಾವನಿಗೆ ಕೈ, ಕಾಲು , ತಲೆಗೆ ಗಾಯಗಳಾಗಿ ಹಾಗೂ ಹಲ್ಲು ಉದರು ಹೋಗಿತ್ತು.

ಅಪಘಾತ ಮಾಡಿದ್ದು ಯಾರು ಎಂದು ತಿಳಿದುಕೊಂಡಾಗ ಅವರ ಹೆಸರು ಅಮರೇಶ್ ಎಂದು ತಿಳಿಯಿತು.

ಸಾಕ್ಷಿಗೆ ನಿಪಿ 2 ನ್ನು ತೋರಿಸಲಾಗಿ ಅದರಲ್ಲಿರುವ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರತಿಸಿದ್ದು. ಅದನ್ನು ನಿಪಿ 2 ಸಿ ಎಂದು ಗುರುತಿಸಲಾಯಿತು. ನಿಪಿ 2 ಕ್ಕೆ ಸಹಿಯನ್ನು ನಾನು ದಿಃ 12-05-2022 ರಂದು ಕೆಂದನಹಳ್ಳಿ ಗೇಟ್ ನ ಬಳಿ ಮಾಡಿದೆನು. ನನ್ನ ಜೊತೆ ಚಾಸಾ 4, 5 ಸಹಿ ಮಾಡಿದರು. ನಿಪಿ 2 ಕ್ಕೆ ನಾನು ಸಹಿ ಮಾಡಿದಾಗ ಮಧ್ಯಾಹ್ನ 2.30 -3.00 ಗಂಟೆ ಆಗಿತ್ತು. ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನಿಪಿ 2 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತು.

**ಪಾಟೀಸವಾಲುಃ ಆರೋಪಿ ಪರ ಶ್ರೀ.ಎನ್. ಕೆ. ಡಿ. ವಕೀಲರಿಂದಃ**

ಪೋಲೀಸರು ಕೆಂದನಹಳ್ಳಿ ಗೇಟ್ ನ ಬಳಿ ನನ್ನನ್ನು ವಿಚಾರ ಮಾಡಿದರು. ಪೋಲೀಸರು ಅಪಘಾತದ ಬಗ್ಗೆ ಕೈ ಬರವಣಿಗೆಯಲ್ಲಿ ದಿಃ 12-05-2022 ರಂದು ಬರೆದುಕೊಂಡರು. ಆ ದಿನದ ನಂತರ ಪೋಲೀಸರು ಯಾವುದೇ ಹೇಳಿಕೆಯನ್ನು ನನ್ನಿಂದ ಪಡೆದುಕೊಂಡಿಲ್ಲ. ನಾನು ದಿಃ

12-05-2022 ಬಿಟ್ಟು ಪೋಲಿಸ್ ಠಾಣೆಗೆ ಬೇರೆ ಯಾವುದೇ ದಿನ ಹೋಗಿಲ್ಲ ಎಂದರೆ ಸರಿ. ದಿಃ 12-05-2022 ಪೋಲೀಸರು ನನ್ನನ್ನು ಕರೆದು ಯಾವುದೇ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ಕೆಂದನಹಳ್ಳಿ ಗೇಟ್ ಗೂ ಮತ್ತು ಪೆರುಮಾಚನಹಳ್ಳಿ ಗೇಟ್ ಗೂ 1 ಕಿ.ಮಿ. ಅಂತರ ವಿರುತ್ತದೆ ಎಂದರೆ ಸಾಕ್ಷಿಯು ಅರ್ಧ ಕಿ.ಮಿ. ಇರುತ್ತದೆ. ಅಪಘಾತದ ಸ್ಥಳದ ಹತ್ತಿರ ಅಂಗಡಿಗಳು, ಹೋಟೆಲ್ ಗಳು ಮತ್ತು ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ಮಧ್ಯಾಹ್ನ 2.30-3.00 ಗಂಟೆ ಸಮಯದಲ್ಲಿ ಅಪಘಾತದ ಸ್ಥಳದಲ್ಲಿ ಹೆಚ್ಚಿಗೆ ಜನ ಓಡಾಡುತ್ತಾರೆ ಎಂದರೆ ಸರಿ. ಮಧ್ಯಾಹ್ನ 12.00 ಗಂಟೆಗೆ ಪೋಲೀಸರು ಅಪಘಾತದ ಸ್ಥಳಕ್ಕೆ ನನಗೆ ಕರೆ ಮಾಡಿ ಕರೆದರು. ನನ್ನ ಜೊತೆ ಪೋಲೀಸರು ಚಾಸಾ 5 ಮತ್ತು 14 ರವರನ್ನು ಕರೆದಿದ್ದರು. ಪೋಲೀಸರು ಪಂಚನಾಮೆ ಮಾಡಲು ಅಕ್ಕ ಪಕ್ಕದ ಜನರನ್ನು ಬರಮಾಡಿಕೊಳ್ಳಲು ಪ್ರಯತ್ನ ಮಾಡಿದರಾ ಎಂದರೆ ಸಾಕ್ಷಿಯು ಇಲ್ಲ ಆ ಸಮಯದಲ್ಲಿ ಯಾರು ಇರಲಿಲ್ಲ. ಘಟನಾ ದಿನದಂದು ಇಬ್ಬರೂ ಪೋಲೀಸರು ಬಂದಿದ್ದರು. ಘಟನಾ ಸ್ಥಳದಲ್ಲಿ ಪೋಲೀಸರು ಅಪಘಾತವಾದ ಬಗ್ಗೆ ಕೈಯಲ್ಲಿ ಬರೆದುಕೊಂಡರು. ಪೋಲೀಸರು ವಿಚಾರ ಬರೆದುಕೊಂಡ ನಂತರ ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ. ಘಟನಾ ಸ್ಥಳದಲ್ಲಿ ಪೋಲೀಸರು ಏನಾದರೂ ನಕ್ಷೆಯನ್ನು ತಯಾರು ಮಾಡಿದರಾ ಎಂದರೆ ನನಗೆ ಗೊತ್ತಿಲ್ಲ. ಪೋಲೀಸರು ಅಪಘಾತದ ವಿಚಾರ ಬರೆದುಕೊಂಡ ನಂತರ ನನಗೆ ಓದಿ ಹೇಳಿಲ್ಲ. 12-05-2022 ರಂದು ಪೋಲೀಸರು ಬರೆದುಕೊಂಡ ಹೇಳಿಕೆಯನ್ನು ನನಗೆ ಓದಿ ಹೇಳಿದರು.

ಚಾಸಾ 1 ಮತ್ತು 2 ನನಗೆ ಭಾವ ಆಗಬೇಕು. ಚಾಸಾ 4 ಮತ್ತು 5 ರವರು ನಮ್ಮ ಊರಿನವರು. ನನ್ನ ತಂಗಿ ಮಗಳ ವನಜಗೆ ಕೇಸು ಹಾಕಿ ಪರಿಹಾರವನ್ನು ತೆಗೆದುಕೊಂಡಿರುತ್ತಾರೆ. ನಾನು ಮತ್ತು ಚಾಸಾ 4 ಮತ್ತು 5 ರವರು ಪೋಲೀಸ್ ಠಾಣೆಯಲ್ಲಿ ಸಹಿ ಹಾಕಿದೆವು ಎಂದರೆ

ಸರಿಯಲ್ಲ. ಕೆಂದನಹಳ್ಳಿ ಗೇಟ್ ನ ಹತ್ತಿರ ಹಾಕಿದೇವು. ಚಾಸಾ 1 ಮತ್ತು 2 ರವರು ಇವತ್ತು ಸಹ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿ. ಚಾಸಾ 1 ಮತ್ತು 2 ರವರು ನನಗೆ ಸಾಕ್ಷ್ಯ ಹೇಳಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಬಸ್ ಚಾಲಕನಿಂದ ಅಪಘಾತ ಆಗಿಲ್ಲ, ಆಟೋ ಚಾಲಕನ ಅಜಾಗರೂಕತೆಯಿಂದ ಅಪಘಾತ ಆಗಿತ್ತು, ನಾವು ಬಸ್ಸಿಗೆ ವಿಮೆ ಇರುವುದರಿಂದ ಅವರ ಮೇಲೆ ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.